

**ಬೇಸಿಗೆಯಲ್ಲೂ ಹೂವಿನಂತಿರುವ, ಸುತ್ತಲೆಲ್ಲ ಬಿಸಿಲು ಕುಣಿಯುತ್ತಿದ್ದರೂ ತನ್ನ ತಂಪಗಿನ ಮೈಯನ್ನು ನಮ್ಮ ಮೈಗೂ ಸ್ಪರ್ಶಿಸುತ್ತ ತಂಪಾದವ್ರೋ ಎಲ್ಲಾ ತಂಪಾದವ್ರೋ ಎಂಬ ಹಾಡನ್ನು ಗುನುಗಿಕೊಳ್ಳುವಂತೆ ಮಾಡುವ ಜಲಪಾತವೇ ಉಡುಪಿ ಜಿಲ್ಲೆಯ ಕೂಡ್ಲು ಎನ್ನುವ ಸುರಸುಂದರಿ. ಬಿಸಿ ಬಿಸಿ ಬಿಸಿಲಿಗೆ ಬಳಲಿ ಬೆಂಡಾಗಿರೋವಾಗ ಈ ಕೂಡ್ಲು ಜಲಪಾತ ಸಖ್ಯ ಸಿಕ್ಕರೆ ಸಾರ್ಥಕ.**

**ಟಿಕೆಟ್ ಎಷ್ಟು:** ವಯಸ್ಕರಿಗೆ ₹50 ಮಕ್ಕಳಿಗೆ ₹ 25 ಟಿಕೆಟ್ ದರ.
**ಯಾವಾಗ ಪ್ರವೇಶ:** ಮಳೆಗಾಲದಲ್ಲಿ ಈ ತಾಣಕ್ಕೆ ಪ್ರವೇಶವಿಲ್ಲ. ಅಕ್ಟೋಬರ್ ಮೇ ತಿಂಗಳವರೆಗೂ ಪ್ರವಾಸಿಗರಿಗೆ ಮುಕ್ತ ಅವಕಾಶವಿದೆ.
**ಬೈಕ್/ಕಾರು ಬೆಟರ್:** ಇಕ್ಕಟ್ಟಾಗಿರುವ, ಕೊಂಚ ಕಳಪೆಯಾಗಿರುವ ಇಲ್ಲಿನ ರಸ್ತೆಯಲ್ಲಿ ಸಾದಾ ಬೈಕುಗಳ ಸಂಚಾರ ಕೊಂಚ ಕಷ್ಟವಾದರೂ ಸಾಗಲೇನೂ ಅಡ್ಡಿಯಿಲ್ಲ. ಉಳಿದಂತೆ ಕಾರು, ವ್ಯಾನ್‌ಗಳಲ್ಲಿ ಬಂದರೂ ದಾರಿ ಸುಗಮ.

## ಎಲ್ಲಿದೆ?

ಇದು ಉಡುಪಿ ಜಿಲ್ಲೆಯ ಹೆಬ್ರಿಯಲ್ಲಿದೆ. ಬೆಂಗಳೂರಿನಿಂದ ಸುಮಾರು 373 ಕಿ.ಮೀ. ದೂರ. ಉಡುಪಿ ಪೇಟೆಯಿಂದ 64 ಕಿ.ಮೀ., ಆಗುಂಬೆಯಿಂದ 26 ಕಿ.ಮೀ. ದೂರವಿದೆ. ಹೆಬ್ರಿ–ಸೋಮೇಶ್ವರ ದಾರಿಯಲ್ಲಿ ಸುಮಾರು 20 ಕಿ.ಮೀ. ಸಾಗಿದಾಗ ರಸ್ತೆಯ ಬಲ ಬದಿಯಲ್ಲಿ 'ಕೂಡ್ಲು ತೀರ್ಥಕ್ಕೆ ಹೋಗುವ ದಾರಿ' ಎನ್ನುವ ಬೋರ್ಡ್ ಕಾಣಿಸುತ್ತದೆ. ಅಲ್ಲಿಂದ ಸುಮಾರು 7 ಕಿ.ಮೀ. ಸಾಗಿದರೆ ಕೂಡ್ಲು ತೀರ್ಥ ಸ್ವಾಗತ ದ್ವಾರ ಸಿಗುತ್ತದೆ. ಅಲ್ಲಿ ಟಿಕೆಟ್ ಮಾಡಿಸಿ ಕಾಡ ದಾರಿಯಲ್ಲಿ ಸುಮಾರು 1.2 ಕಿ.ಮೀ. ನಡೆದರೆ ಜಲಪಾತ ಸಿಗುತ್ತದೆ.

ಕಾಡದಾರಿಯಲ್ಲಿ ಒಂದಷ್ಟು ನಡೆಯಬೇಕಾಗುವುದರಿಂದ ಕಾಡಿನಲ್ಲಿ ನಡೆದು ಜಲಪಾತ ನೋಡುವ ಸುಖ ಬೇಕು ಎನ್ನುವವರಿಗೆ ಇದು ಸೂಕ್ತ ತಾಣ. ವಯಸ್ಸಾದವರಿಗೆ, ಕಾಡಿನಲ್ಲಿ ನಡೆಯೋದು ಕಷ್ಟ ಎನ್ನುವವರಿಗೆ ಈ ತಾಣ ಇಷ್ಟವಾಗಲ್ಲ.

ಬೆಳಗ್ಗೆ 9ರಿಂದ ಸಂಜೆ 5ರ ಒಳಗೆ ಪ್ರವೇಶ. ಸಂಜೆವರೆಗೂ ಕೂಡ್ಲು ತೀರ್ಥದಲ್ಲಿ ಸಮಯ ಕಳೆದರೆ ಮನಸ್ಸು ರಿಲ್ಯಾಕ್ಸ್ ಆಗುತ್ತದೆ. ಒಂದು ದಿನ ಪ್ರವಾಸದ ಮೂಡನ್ನು ಎಂಜಾಯ್ ಮಾಡಲು ಈ ತಾಣ ಸೂಪರ್.

## ದಾರಿಯಲ್ಲಿಯೇ ತಿಂಡಿ ಮಾಡಿ

ಕುಡ್ಲು ತೀರ್ಥ ಕಾಡಿನ ನಿರ್ಜನ ಪ್ರದೇಶದಲ್ಲಿರುವುದರಿಂದ ಇಲ್ಲಿಗೆ ಬಂದರೆ ಇಲ್ಲಿ ತಿಂಡಿ–ತೀರ್ಥ ಸಿಗುವ ಹೊಟೇಲ್‌ಗಳ ವ್ಯವಸ್ಥೆ ಇಲ್ಲ. ಕೂಡ್ಲು ತೀರ್ಥದ ದಾರಿ ಹಿಡಿಯೋ ಮೊದಲು ಸಿಗುವ ಒಂದೆರಡು ಹೊಟೇಲ್‌ಗಳಲ್ಲಿ ತಿಂಡಿ ಮುಗಿಸಿ, ಆಮೇಲೆ ಕೂಡ್ಲು ತೀರ್ಥಕ್ಕೆ ತೆರಳಬಹುದು. ಕೂಡ್ಲು ತೀರ್ಥದಲ್ಲಿ ಊಟ, ತಿಂಡಿ ತೆಗೆದುಕೊಂಡು ಹೋಗಲು ಅವಕಾಶವಿಲ್ಲ. ನೀರಿನ ಬಾಟಲಿ, ಜ್ಯೂಸ್ ಬಾಟಲಿ ಒಯ್ಯಬಹುದಾದರೂ ಅಲ್ಲಲ್ಲಿ ನೀರು ಕುಡಿದು ಬೀಸಾಡಿದರೆ ಅರಣ್ಯ ಇಲಾಖೆ ದಂಡ ಹಾಕೋದು ಗ್ಯಾರಂಟಿ.

## ಉಳಿದುಕೊಳ್ಳಲು ರೆಸಾರ್ಟ್

ರಾತ್ರಿ ಉಳಿದುಕೊಳ್ಳಲು ಆಗುಂಬೆ ಸೋಮೇಶ್ವರ ರಸ್ತೆಯಲ್ಲಿ ಕಾಡು ಮನೆ ಹೋಮ್ ಸ್ಟೇ (ಸಂಪರ್ಕ: 7892539602, 9880130826) ಲಭ್ಯವಿದೆ. ಹೆಬ್ರಿಯಲ್ಲಿ ಅರಣ್ಯ ಇಲಾಖೆಯ ಸೀತಾನದಿ ರೆಸಾರ್ಟ್ (ಸಂಪರ್ಕ: 9449599758) ಲಭ್ಯವಿದೆ. ಈ ರೆಸಾರ್ಟ್‌ನಲ್ಲಿ ಕಾಡಲ್ಲಿ ಹರಿಯುವ ಸೀತಾನದಿಯ ಚಂದವನ್ನೂ ಸವಿಯಬಹುದು.

ಬೇಸಿಗೆಯಲ್ಲಿ ಹೆಬ್ರಿ ಪ್ರದೇಶದಲ್ಲಿ ಸುಮಾರು 30 ಡಿಗ್ರಿ ಸೆಲ್ಸಿಯಸ್ ನಷ್ಟು ತಾಪಮಾನವಿದ್ದರೂ, ಕೂಡ್ಲು ತೀರ್ಥ ಪ್ರದೇಶದಲ್ಲಿ ಸುಮಾರು 26 ಡಿಗ್ರಿ ಸೆಲ್ಸಿಯಸ್‌ನಷ್ಟಿರುತ್ತದೆ. ಮಧ್ಯಾಹ್ನದ ಬಳಿಕ ತಾಪಮಾನ ಇಳಿದು ಕೂಲ್ ಕೂಲ್ ಆಗಿರುತ್ತದೆ. ■

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in